


ಎಡದಿಂದ ಬಲಕ್ಕೆ:

1. ಅಕ್ರಮವೆಂದು ತಿಳಿಸಿದರೂ ಅರ್ಥವೇ ಆಗದಂಥ ಮುಗ್ಧ 4
3. ಪರಿಣಾಮವನ್ನು ಅರಿತಿರಾ? ಇದು ಓಂಕಾರ 3
4. ಸ್ವಲ್ಪವೂ ಕಡಿಮೆಯಾಗಿಲ್ಲ ಲಾಭದಾಸೆ; ಬರೀ ದುರಾಸೆ 3
6. ನೂರು ಅಪಾಯಗಳನ್ನು ಎದುರಿಸಲೇಬೇಕು; ಬೇರೆ ತಂತ್ರವೇ ಇಲ್ಲ 4
7. ಪದ್ಯ ಸಂಕಲನಕ್ಕೆ ಬೇಕಾದ ಕವಿತೆಗಳನ್ನು ಸಂಗ್ರಹಿಸಿದಾತ 4
9. ಕಂಗಾಲು ಮಾಡಿತ್ತು, ಮುಗಿದುಹೋದ ಆ ಸಮಯ 4
11. ಹೊಸ ಕೆಲಸ ಏನಲ್ಲ, ಇದೆಲ್ಲ ಕೈ ಕಸೂತಿಯ ನಿರ್ಮಿತಿ 4
13. ನೀವೇ ನೋಡಿ ತರಬಹುದಾದ ವಸ್ತು, ಈ ಬೆಣ್ಣೆ 4
15. ಹೆಚ್ಚು ಕಡಿಮೆ ಇಲ್ಲದೆ ಶುರುವಾಯಿತು, ಸಂಭ್ರಮದ ಆಚರಣೆ 4
17. ವಿಹರಿಸಲು ಬಂದವರಿಗೆಲ್ಲ ಉಡುಗೊರೆ ನೀಡಿದ್ದು ಮಣ್ಣಿನ ಮಡಿಕೆ 3
18. ಸಂಚರಿಸಲು ಯೋಗ್ಯವಾದ ವಾಹನವನ್ನು ನಿರ್ಮಿಸು 3
19. ಲೇಟಾಗಿ ಗುಣಿ ತೋಡಿ ಬೆಳೆಸಿದ ಕಾಳು 4

ಮೇಲಿಂದ ಕೆಳಕ್ಕೆ:

1. ಯಾರಿಗೆ ಅನಿವಾರ್ಯವಲ್ಲ ಹೇಳಿ, ಭೂಮಿ? 3
2. ಕಲ್ಯಾಣ ಕಾರ್ಯಕ್ಕೆ ಮುನ್ನ ಕಿಲುಬು ಹಿಡಿಯದ ಲೋಹ ಲೇಪನ 3
3. ಪ್ರಸನ್ನ ವದನ ದೇವನಿಗೆ ಅರ್ಪಿಸಿ ಹಂಚಿದ ವಸ್ತು 3
5. ಸುಳ್ಳೆಂದು ತಿಳಿದಿದ್ದರೂ ಏನಿಂಥ ಆಕರ್ಷಣೆ? 3
7. ಸಿಂಹದ ಸಾವಿನ ಬಗೆಗೆ ಏನೋ ಸಂಶಯ 3
8. ಕೇಳಿದ ಕೂಡಲೇ ದೊರಕುತ್ತದೆ ಈ ದ್ವಿದಳ ಕಾಳು 3
9. ಗುಹಾವ್ಯೂಹವನ್ನು ಹೊಕ್ಕು ಹೊರಬರುವ ಕ್ರಮ ಅರ್ಥವಾಗುತ್ತಿಲ್ಲ 3
10. ತೇಲುತ್ತಲೇ ಇರುವಂತೆ ಕಾಣುವ ಈ ನಿರ್ಮಿತಿ ಎಷ್ಟು ಸುಂದರ! 3
12. ಹೊಲದಲ್ಲಿ ಕೆಲಸ ಮಾಡುವಾಗ ಭಾರೀ ವಾಗ್ಯುದ್ಧ ನಡೆಯಿತೇ? 3
14. ಬಣ್ಣ ಬೆರೆಸುವುದು ಹೇಗೆಂದು ವಿಸ್ತಾರವಾಗಿ ವಿವರಿಸು 3
15. ಸಾವಿಲ್ಲದ ಸೃಷ್ಟಿ ಯಾವುದೂ ಇಲ್ಲ ಸೂರ್ಯ ಕೂಡ 3
16. ಬಣ್ಣ ಸಂಗ್ರಹಿಸಲು ತಕ್ಕ ಸುಂದರ ಡಬ್ಬಿ 3

### 23-5-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಅನಿಶ್ಚಿತ 3. ವಿರೋಧ ; 4. ವರಾತ ; 6. ಬಲಾಬಲ 8. ಬಲಿದಾನ 10. ತದ್ವಿರುದ್ಧ 12. ನಕ್ಷತ್ರಕ 16. ರಕ್ಕಸ 17. ರಪತೆ (=ತೆಪರ ಹಿಂದುಮುಂದು) 18. ನೆಲಬಲ

ಮೇಲಿಂದ ಕೆಳಕ್ಕೆ:

1. ಅಧಮ 2. ತವರು 3. ವಿಳಂಬ 5. ತಬ್ಬಲಿ 6. ಬಲವಂತ 7. ಲಯಬದ್ಧ 8. ಬಡತನ 9. ನಳಪಾಕ 11. ರುಧಿರ 13. ಕ್ಷಮತೆ 14. ವಾಸನೆ 5. ಸರಲ



# ಎಲ್ ಡೊರಾಡೋ ಏಕೆ ಪ್ರಸಿದ್ಧ?

ಎಲ್ ಡೊರಾಡೋ– ಹಾಗೆಂದರೆ ಬಂಗಾರದ ನಾಡು ಎಂದರ್ಥ. ಸ್ಪ್ಯಾನಿಶ್ ಭಾಷೆಯ ಈ ಪದಕ್ಕೆ ಬಂಗಾರದ ಮನುಷ್ಯ ಎಂಬ ಅರ್ಥವೂ ಇದೆ. ವಾಸ್ತವವಾಗಿ ಎಲ್ ಡೊರಾಡೋ ಅಷ್ಟಿಷ್ಟು ಸತ್ಯವೂ ಬೆರೆತಿರುವ ಒಂದು ಮಿಥ್ಯೆ; ಅಪಾರ ಬಂಗಾರದ ನಿಧಿಯ ಬೆನ್ನು ಹತ್ತಿದ ಹೇರಳ ಸಾಹಸಿಗಳ, ಅನ್ವೇಷಕರ ಬಲಿ ಪಡೆದಿರುವ 'ಚಿನ್ನದ ಜಿಂಕೆ'. ದಕ್ಷಿಣ ಅಮೆರಿಕದ ಅಮೆಜೋನಿಯಾ ಪ್ರದೇಶದಲ್ಲಿ ಶತಮಾನಗಳಿಂದ ಜನಜನಿತವಾಗಿರುವ, ಇಂದಿಗೂ ಪ್ರಚಾರದಲ್ಲಿರುವ ದಂತ ಕಥೆಗಳೇ ಎಲ್ ಡೊರಾಡೋ ಕಲ್ಪನೆಯ ಆಕರ. ಅದೊಂದು ರೋಚಕ, ರೋಮಾಂಚಕ ಕಥಾನಕ.

ಕ್ರಿಸ್ತಶಕ 16ನೆಯ ಶತಮಾನದ ಆದಿ ಭಾಗದಲ್ಲಿ ಸ್ಪೇನ್ ದೇಶದ ಸಾಹಸೀ ಅನ್ವೇಷಕರು ದಕ್ಷಿಣ ಅಮೆರಿಕಕ್ಕೆ ಕಾಲಿಟ್ಟಾಗ ಆ ಕಾಲದಲ್ಲಿ ಈಗಿನ ಕೊಲಂಬಿಯಾ ದೇಶದಲ್ಲಿದ್ದ ಬಂಗಾರ ಭರಿತ ಪ್ರಾಚೀನ ಪುಟ್ಟ ರಾಜ್ಯವೊಂದರ ಬಗೆಗೆ ದಟ್ಟವಾಗಿ ಹರಡಿದ್ದ ವದಂತಿಯೊಂದನ್ನು ಗಂಭೀರವಾಗಿ ಪರಿಗಣಿಸಿದರು. ಆ ಪ್ರಕಾರ ಆ ರಾಜ್ಯದಲ್ಲಿ ಪ್ರತಿ ಬಾರಿ ಹೊಸ ಅರಸನೊಬ್ಬ ಪಟ್ಟಕ್ಕೆ ಏರುವಾಗಲೂ ಒಂದು ವಿಶೇಷ ಸಾರ್ವಜನಿಕ ಆಚರಣೆ ನಡೆಯುತ್ತಿತ್ತು. ಅಂದು ಆ ಅರಸ ಆ ರಾಜ್ಯದ ಒಂದು ನಿರ್ದಿಷ್ಟ ಬೃಹತ್ ಸರೋವರದ ಬಳಿ ಬಂದು ತನ್ನ ಇಡೀ ಶರೀರಕ್ಕೆ ಬಂಗಾರದ ಪುಡಿಯನ್ನು ಲೇಪಿಸಿಕೊಂಡು, ಭಟರೊಡನೆ ಬಂಗಾರದ ತೆಪ್ಪವೊಂದನ್ನು ಏರಿ (ಚಿತ್ರ 2), ಸರೋವರದ ನಡುಭಾಗಕ್ಕೆ ಬರುತ್ತಿದ್ದ. ಅಲ್ಲಿಂದ ಟನ್‌ಗಟ್ಟಲೆ ಚಿನ್ನದ ಆಭರಣಗಳನ್ನು ಜಲದೇವತೆಗೆಂದು ನೀರಿಗೆಸೆದು




ಸಮರ್ಪಿಸುತ್ತಿದ್ದ. ಹಾಗೆ ಹಲವಾರು ಅರಸರು ಅರ್ಪಿಸಿದ್ದ ಅಪಾರ ಬಂಗಾರ ನಿಧಿ ಆ ಸರೋವರದ ತಳದಲ್ಲಿ ಸಂಗ್ರಹವಾಗಿತ್ತು; ಅಲ್ಲೇ ಉಳಿದಿತ್ತು!

ಆಗಿನಿಂದಲೂ ಈ ಸುದ್ದಿಯ ಸತ್ಯಾಸತ್ಯತೆಗಳನ್ನು ಕುರಿತು ಹೇರಳ ಸಂಶೋಧನೆಗಳು ಮತ್ತು ಸಾಹಸದ ಅನ್ವೇಷಣೆಗಳು ನಡೆಯುತ್ತಲೇ ಬಂದಿವೆ. ಎಲ್ ಡೊರಾಡೋ ಸ್ಥಳದ ಪತ್ತೆಗಾಗಿ ದುರ್ಗಮ ಕಾನನಗಳಲ್ಲಿ ಪ್ರವಹಿಸುವ ಅಪಾಯಕಾರೀ ನದಿಗಳ ಮೂಲಕ (ಚಿತ್ರ1, 3) ಸಾಗಿ ಪರಮ ಸಾಹಸೀ ತಂಡಗಳು ಕೈಗೊಂಡ ಶೋಧ ಕಾರ್ಯದಲ್ಲಿ ಹಲವಾರು ದುರಂತಗಳು ಸಂಭವಿಸಿದುವು ಕೂಡ. ಕಡೆಗೆ ಈಗಿನ ಕೊಲಂಬಿಯಾ ದೇಶದಲ್ಲಿರುವ 'ಗುವಿಟಾವಿಟಾ' ಸರೋವರವೇ ಎಲ್ ಡೊರಾಡೋದ ನೆಲೆ ಎಂಬ ನಿರ್ಧಾರವೂ ಆಯಿತು.

2300 ಅಡಿ ಉದ್ದದ, 400 ಅಡಿಗಳಿಗೂ ಅಧಿಕ ಆಳದ ಈ ಸರೋವರದಲ್ಲಿ ಮುಳುಗಿ ಹುಡುಕುವ ಮತ್ತು ನೀರನ್ನೆಲ್ಲ ಖಾಲಿ ಮಾಡಿ ಚಿನ್ನದ ನಿಧಿಯನ್ನು ಎತ್ತುವ ಪ್ರಯತ್ನವೂ ನಡೆಯಿತು. ಆದರೆ, ಯಾವ ತಂತ್ರವೂ ಯಶಸ್ವಿಯಾಗದೆ, ಭಾರೀ ನಿಧಿ ಯಾವುದೂ ಯಾರಿಗೂ ಸಿಗದೆ ಇಂದಿಗೂ ಎಲ್ ಡೊರಾಡೋ ನಿಗೂಢವಾಗಿಯೇ ಉಳಿದಿದೆ; ಹಾಗಾಗಿಯೇ ವಿಶ್ವ ಪ್ರಸಿದ್ಧವಾಗಿದೆ.

■ ಎನ್. ವಾಸುದೇವ್